Sri H. N. NANJE GOWDA (Minister of State for Major Irrigation). —

Veerapur tank project is not yet cleared by the Government of India.

Attiveri Tank Project is not taken up as it is economically infeasible.

ಶ್ರೀ ಜೆ. ಸಿ. ಪಾಟೀಲ್.—ಅತ್ತಿವೇರಿ ಕೆರೆ ಯೋಜನೆಯು ಆರ್ಥಿಕ ದೃಷ್ಟಿಯಿಂದ ಸೂಕ್ತ ವಲ್ಲದ್ದರಿಂದ ಕೈಕೊಂಡಿರುವುದಿಲ್ಲವೆಂದು ತಿಳಿಸಿದ್ದಾರೆ. ಇದರ ಬಗ್ಗೆ ಏನೇನಾಗಿದೆ ಎಂದು ತಿಳಿಸುತ್ತಾರೆಯೇ ?

† ಶ್ರೀ ಎಚ್. ಎನ್. ನಂಜೇಗೌಡ.—ಅತ್ತಿವೇರಿ ಕೆರೆಗೆ ಸಂಬಂಧಪಟ್ಟಂತೆ ಅರವತ್ತೇಳೂವರೆ ಲಕ್ಷ ರೂಪಾಯಿಗಳಿಗೆ ಅಡಳಿತ ಮಂಜೂರಾತಿಯನ್ನು ಸರ್ಕಾರ ಕೊಟ್ಟಿತ್ತು. ಅದಾದ ನಂತರ ಎಲ್ಲ ವಿವರಗಳನ್ನೂ ಪರಿಶೀಲಿಸಿ, ಎಸ್ಟಿಮೇಟನ್ನು ತಯಾರಿಸಿದಾಗ ಅದು 1,22,20,000 ರೂಪಾಯಿಗೆ ಬಂತು. ಇದು ಎರಡು ಸಾವಿರ ಚಿಲ್ಲರೆ ಎಕರೆ ನೀರಾವರಿ ಮಾಡುವುದಕ್ಕೆ ಕಾಸ್ಟ್‌ಪರ್ ಎಕರ್ ವಿಪರೀತವಾಯಿತು ಎನ್ನುವ ದೃಷ್ಟಿಯಿಂದ ಸೆಪ್ಟೆಂಬರ್ 71 ರಲ್ಲಿ ಮುಂಜೂರಾತಿಯನ್ನು ಪಾಪಸ್ಸು ಪಡೆಯಲಾಯಿತು. ಅದಾದ ನಂತರ ಇದನ್ನು ರೀ ಇನ್‌ವೆಸ್ಟಿಗೇಟ್ ಮಾಡಿ ಫೀಸಿಬರ್ ಎನ್ನುವ ಹಾಗೆ ಮಾಡಿ ಎಂದು ಡಬ್ಲ್ಯು. ಆರ್. ಡಿ. ಓ. ಅವರಿಗೆ ವಿವರವಾಗಿ ತಯಾರು ಮಾಡುವುದಕ್ಕೆ ಹಾಕಿದ್ದೇವೆ.

## Payment of Pension to the Primary School Teachers of Mudhol and Jamkhandi

439. Sri P. M. BANGI (Jamkhandi). —

Will the Minister for Education be pleased to state :—

(*a*) whether Government is aware that pension to the retired primary school teachers of all the merged erstwhile states—Deccan States—including Mudhol, Jamkhandi, Sangli have not been paid so far ;

(*b*) if so, the reasons for the same ;

(*c*) whether there is any proposal before Government to issue orders for the payment of pensions to the above teachers ?

Sri A. R. BADARINARAYANA (Minister for Education).—

(*a*) Yes.

(*b*) The service condition of teachers of ex-princely States of Mudhol, Jamkhandi, Sangli, etc., were governed by Bombay Civil Service Rules. Subsequently these schools were taken over by the District School Boards and again all the schools run by the District School Boards/Municipal School Boards have been taken over by Government, The pension case of these teachers are held up for want of verification of C.P.F. contributed by the former District School Boards and crediting the recovery of the same to Government.

Yes.

ಶ್ರೀ ಪಿ. ಎಂ. ಬಂಗಿ.—ಮುಧೋಳ್, ಜಮಖಂಡಿ, ರೋಣ ಮುಂತಾದ ಸಂಸ್ಥಾನಗಳ ಪೆನ್ಷನ್ ಹೊಂದಿದ ಶಿಕ್ಷಕರು ಎಷ್ಟು? ಆ ಬಗ್ಗೆ ಪರಿಶೀಲನೆ ಮಾಡಿದ್ದೀರಾ ಹೇಗೆ? ಮತ್ತು ಅವರ ಅಪ್ಲಿಕೇಷನ್ಸ್ ನಾಲ್ಕು ವರ್ಷವಾದರೂ ಇನ್ನೂ ಹಾಗೆಯೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೋ ಹೇಗೆ?

†ಶ್ರೀ ಎ. ಆರ್. ಬದರಿನಾರಾಯಣ್.—ಎಷ್ಟು ಜನರಿದ್ದಾರೆ ಎನ್ನುವ ಅಂಕಿ ನನ್ನ ಹತ್ತಿರ ಇಲ್ಲ. ಕೆಲವು ಸಂದರ್ಭಗಳಲ್ಲಿ ನಿಧಾನವಾಗಿರುವುದಕ್ಕೆ ಕಾರಣವೇನೆಂದರೆ ಪ್ರಾವಿಡೆಂಟ್ ಫಂಡ್ ಹಣವನ್ನು ಹಿಂದಿನ ಡಿಸ್ಟ್ರಿಕ್ಟ್ ಸ್ಕೂರ್ ಬೋರ್ಡ್ಸ್‌ನವರು ಕೊಡಬೇಕು. ಅವರು ಕೊಡುವವರೆಗೂ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಪಿ. ಎಂ. ಬಂಗಿ.—ಸುಮಾರು ನಾಲ್ಕು ವರ್ಷವಾಯಿತು. ಇನ್ನೂವರೆಗೆ ತೀರ್ಮಾನವಾಗದೆ ಇರುವುದರಿಂದ ಅವರ ಮೇಂಟೆನೆನ್ಸ್ ಪ್ರಶ್ನೆ ಬಹಳ ಕಠಿಣವಾಗಿದೆ. ಆದುದರಿಂದ ತಾವು ಕೂಡಲೇ ಅವರ ಪೆನ್ಷನ್ ಫಿಕ್ಸ್ ಮಾಡಿ ಅವರಿಗೆ ಪೆನ್ಷನ್ ಕೊಡುತ್ತೀರೋ ಹೇಗೆ? ಮತ್ತು ಅಲ್ಲಿಯವರೆಗೂ ಅಡಹಾಕ್ ಪೇಮೆಂಟ್ ಏನಾದರೂ ಕೊಡುತ್ತೀರಾ?

ಶ್ರೀ ಎ. ಆರ್. ಬದರಿನಾರಾಯಣ್.—ಡಿಸ್ಟ್ರಿಕ್ಟ್ ಸ್ಕೂರ್ ಬೋರ್ಡ್‌ನಿಂದ ಬರಬೇಕಾದ್ದು ಬರದೆ ಇರುವುದರಿಂದ ನಿಧಾನವಾಗಿದೆ. ಅದನ್ನು ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ. ಎಂ. ಬಂಗಿ.—ತಾವು ಅವರಿಗೆ ಏನಾದರೂ ಅಡ್ವಾನ್ಸ್ ಪೇಮೆಂಟ್ ಮಾಡುತ್ತೀರಾ?

(*No answer*)

## Temporary ban on Developmental Works

443. **Sri S. KARIYAPPA** (Kanakapura).—

Will the Minister for Finance be pleased to state :—

(*a*) whether there is a ban on taking up the developmental works by Government in the State ;

(*b*) if so, the probable period it may take for lifting the ban ?

**Sri M. Y. GHORPADE** (Minister for Finance).—

(*a*) and (*b*) There was a ban on taking up new works as per the G. Os. issued on 11th February 1972 and 1st March 1972. However, the position has now been reviewed and orders have since been issued relaxing the ban imposed on new works.

ಶ್ರೀ ಎಚ್. ಪುಟ್ಟಸ್ವಾಮಿ.—ಸ್ವಾಮಿ, ಈ ನಿಷೇಧವನ್ನು ಸಡಿಲಗೊಳಿಸಲಾಗಿದೆ ಎಂದು ಹೇಳಿದ್ದೀರಿ. ಯಾವ ಯಾವ ಕಾಮಗಾರಿಗಳ ಬಗ್ಗೆ ನಿಷೇಧಾಜ್ಞೆಯನ್ನು ಸಡಿಲಗೊಳಿಸಲಾಗಿದೆ ಎನ್ನುವ ವಿವರ ಕೊಡುತ್ತೀರಾ?

†ಶ್ರೀ ಎಂ. ವೈ. ಘೋರ್ಪಡೆ.—ಎಲ್ಲಾ ಕೆಲಸಗಳ ಬಗ್ಗೆ ಈ ನಿಷೇಧಾಜ್ಞೆಯನ್ನು ತೆಗೆದಿದ್ದಾರೆ. ಬಜೆಟ್ಟಿನಲ್ಲಿ ಪ್ರೊವೈಡ್ ಆಗಿರತಕ್ಕ ಎಲ್ಲಾ ಕೆಲಸಗಳ ಬಗ್ಗೆ ಯಾವ ಒಂದು ಆತಂಕವೂ ಇಲ್ಲ. ಒಂದು ಲಕ್ಷಕ್ಕಿಂತ ಹೆಚ್ಚಾಗಿದ್ದರೆ, ಸರ್ಕಾರದಿಂದ ಸ್ಯಾಂಕ್ಷನ್ ಆಗ ಬೇಕಾಗುತ್ತದೆ. ಬಜೆಟ್ ಲಿಮಿಟೇಷನ್ ಒಳಗೆ ಒಂದು ಲಕ್ಷಕ್ಕೆ ಕಡಿಮೆ ಇದ್ದರೆ, ಸಾಧ್ಯವಾದ ಮಟ್ಟಿಗೆ ಇದೇ ವರ್ಷ ಪೂರೈಸುವ ದೃಷ್ಟಿಯಿಂದ ಇದನ್ನು ಖರ್ಚುಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಒಂದು ಲಕ್ಷಕ್ಕೆ ಜಾಸ್ತಿ ಇರಲಿ, ಕಡಿಮೆ ಇರಲಿ, ಬಜೆಟ್ಟಿನಲ್ಲಿ ಏನು ಏನು ಪ್ರೊವೈಡ್ ಆಗಿದೆ, ಅದನ್ನು ಖರ್ಚು ಮಾಡುವುದರಲ್ಲಿ ಯಾವ ಒಂದು ತೊಂದರೆಯೂ ಇಲ್ಲ.